ಬಂದಿದೆ. ಹಾಗಾದರೆ; ಈ ಕಾರ್ಖಾನೆಯಲ್ಲಿ 10 ಲಕ್ಷ ರೂಪಾಯಿ ಲುಕ್ಸಾನು ಆಗಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಲುಕ್ಸಾನು ಆಗಿಲ್ಲ. ಈ ವರ್ಷದಲ್ಲಿ ಸ್ವಲ್ಪ ಹೆಚ್ಚಿನ ಖರ್ಚು ಸಂಭವಿಸಿತು. ಈ ಖರ್ಚು ಈ ವರ್ಷಕ್ಕೆ ಅನ್ವಯಿಸತಕ್ಕ ಖರ್ಚಾದ್ದರಿಂದ, ಲಾಭದ ಅಂಶದಲ್ಲಿ ಸ್ವಲ್ಪ ಕಡಮೆ ಕಾಣುತ್ತದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಹೆಚ್ಚಿನ ಉತ್ಪನ್ನಕ್ಕೋಸ್ಕರ, ಭಾರತ ಸರ್ಕಾರದ ಸಹಾಯವನ್ನು ತೆಗೆದುಕೊಳ್ಳುವ ಯೋಜನೆ ಇದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಹೌದು, ಭಾರತ ಸರ್ಕಾರದಿಂದ ಸಾಲದ ರೂಪದಲ್ಲಿ ಹಣ ಸಹಾಯ ಪಡೆಯುತ್ತಾ ಇದೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಅದನ್ನು ವಿವರಿಸಿ.

ಶ್ರೀ ಸಿ. ಎಂ. ಪೂಣಚ್ಚ.—ವರ್ಷಂಪ್ರತಿ ಭಾರತ ಸರ್ಕಾರದಿಂದ ಸಾಲದ ರೂಪವಾಗಿ ಈ ರೀತಿ ಹಣ ಪಡೆದಿದ್ದೇವೆ :

		ರೂಪಾಯಿಗಳು.
1951-52	...	40,00,000
1952-53	...	27,00,000
1953-54	...	17,39,000
1954-55	...	37,00,000
1955-56	...	30,27,000
1956-57	...	5,00,000

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಭದ್ರಾವತಿ ಕಬ್ಬಿಣ ಕಾರ್ಖಾನೆಗೆ ಸಂಬಂಧಪಟ್ಟಂತೆ ಒಂದು ಸ್ಪೆಷಲೈಸ್ ಸ್ಟೀಲ್ ಪ್ಲಾಂಟ್ ಸ್ಥಾಪನೆ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಅಂಥ ಯೋಜನೆ ಒಂದು ಇದೆ. ಅದು ಇನ್ನೂ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಒಬ್ಬ ಅಮೇರಿಕನ್ ಎಕ್ಸ್‌ಪರ್ಟ್ ಬಂದು ಈ ವಿಷಯದಲ್ಲಿ ಸರ್ವೆ ಮಾಡಿಕೊಂಡು ಹೋದರಲ್ಲವೇ ?

ಶ್ರೀ ಸಿ. ಎಂ. ಪೂಣಚ್ಚ.—ಪರಿಶೀಲನೆ, ಸರ್ವೆ ಆಗುತ್ತಾ ಇದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇಲ್ಲಿ ಸ್ಥಳ ಅನುಕೂಲವಿಲ್ಲವೆಂದು ವರದಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಿ. ಪಿ. ಮಿತಿನಾರ್ ಮತ್ತು ಕ್ರೂಡ್ ಮಿತಿನಾರ್ ಮಾರಿದ್ದರಿಂದ ಲಾಭ ಎಷ್ಟು ಬಂದಿದೆ ?

ಶ್ರೀ ಸಿ. ಎಂ. ಪೂಣಚ್ಚ.—ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡಬಲ್ಲೆ.

Sri M. C. NARASIMHAN.—Is it not a fact that the capital has varied over these years ?

Sri C. M. POONACHA.—Today it is so. I would, however, require notice to furnish an adequate reply.

Sri J. B. MALLARADHYA.—The answer gives the amount invested by the Government as on 1st April 1957. Does it not include or does it exclude the amount which was written off from the capital ?

Sri C. M. POONACHA.—I would require specific notice for that question.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಭದ್ರಾವತಿ ಕಾರ್ಖಾನೆಯ ಮ್ಯಾನೇಜ್‌ಮೆಂಟ್‌ನ್ನು ಕಾರ್ಪೊರೇಷನ್‌ಗೆ ಒಳಪಡಿಸುತ್ತೀರಾ ?

Mr. SPEAKER.—It is a suggestion for action.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ಕೇಂದ್ರ ಸರ್ಕಾರದಿಂದ ಪಡೆದಿರತಕ್ಕ ಹಣವನ್ನು ಎಷ್ಟು ಕಂತುಗಳಲ್ಲಿ ಮತ್ತು ಯಾವ ಬಡ್ಡಿ ದರದಲ್ಲಿ ವಾಪಸ್ಸು ಕೊಡುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಸಾಧಾರಣವಾಗಿ ಎಲ್ಲ ಅಭಿವೃದ್ಧಿ ಯೋಜನೆಗಳಿಗೂ ಇಂಡಿಯಾ ಸರ್ಕಾರದವರು ಕೊಡುವಂಥ ಸಾಲದ ಬಡ್ಡಿದರ ನಾಲ್ಕು ಶೇಕಡ ವರ್ಷಾಂತ್ಯದಲ್ಲಿ ಎಷ್ಟಾಗುತ್ತದೆ ಎಂಬುದನ್ನು ನಿಷ್ಕರ್ಷವಾಗಿ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ಉತ್ತರ ಒದಗಿಸುತ್ತೇನೆ.

Sri GAJANAN PANDIT.—In the expansion scheme envisaged is there any proposal to put ovens for converting coal into coke ?

Sri C. M. POONACHA.—The question of installing a coke plant here is not quite feasible because we are far away from the coal sources. Therefore, it is more profitable for us to get coke instead of getting coal and getting it converted into coke by installing a plant here.

Sri S. R. RAMIAH.—What is the present market value of the factory ?

Sri C. M. POONACHA.—That will have to be assessed. I am unable to furnish that answer.

Graduation for Promotion to Gazetted posts.

Q.—1578. Sri M. M. J. SADYOJATHAPPAIAH (Harapanahalli).—

Will the Government be pleased to state:—

(*a*) whether it is a fact that only graduates were promoted to gazetted posts in the old Mysore State ;

(*b*) whether they are aware of the fact that no such practice was prevalent in Bombay Karnatak, Hyderabad Karnatak areas and Mangalore ;

(*c*) whether the same old practice will hold good in the case of employees belonging to these areas ?

A.—Sri S. NIJALINGAPPA (Chief Minister).—

(*a*) No.

(*b*) Yes.

(*c*) The old practice will continue till revised rules are framed.

ಶ್ರೀ ಎಂ. ಎಂ. ಜೆ. ನದ್ಯೋಜಾತಪ್ಪಯ್ಯ.—ರಿವೈಸ್ಡ್ ರೂಲ್ಸ್ ಫ್ರೇಂ ಮಾಡಿಲಕ್ಕೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಮಾಡುತ್ತಾ ಇದ್ದೇವೆ.

Dr. R. NAGAN GOWDA.—Is the Government aware that the Deputy Tahsildars of Bellary were not promoted as Tahsildars because they were not graduates?

Sri S. NIJALINGAPPA.—I cannot give the answer offhand. I must enquire and say.

Dr. R. NAGAN GOWDA.—In answer to (*c*) the Government have stated that the old practice will continue. Will this apply to Bellary also?

Sri S. NIJALINGAPPA.—Yes.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ—ದೇಶದಲ್ಲಿ ಉನ್ನತ ವ್ಯಾಸಂಗ ಪಡೆದವರು ಬಹುಮಟ್ಟಿಗೆ ಇರುವುದರಿಂದ ಅವರನ್ನು ನಿಯಮಿಸುವುದು ಉಚಿತವಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಸರ್ವೀಸ್‌ನಲ್ಲಿ ದ್ದವರಿಗೆ ಅನ್ಯಾಯವಾಗಬಾರದಲ್ಲಾ!

Sri G. VENKATAI GOWDA.—Does it mean that the old practice prevalent in old Mysore will continue or the old practices in the various regions will continue?

Sri S. NIJALINGAPPA.—The old practices prevailing in the respective areas will continue.

Sri K. S. SURYANARAYANA RAO.—The answer to (*a*) is 'No' while the answer to (*b*) is Yes'. What is the procedure adopted in the old Mysore area and what is the procedure adopted in Bombay Karnatak?

Sri S. NIJALINGAPPA.—I request my friend to read the questions and answers twice over. Those answers have been given because the questions are worded differently. Otherwise, the answer will be the same for both the questions.

Sri H. C. LINGA REDDY.—When will the rules be revised?

Sri S. NIJALINGAPPA.—They are being revised.

Sri M. C. NARASIMHAN.—My supplementary to (*c*) si whether there is any intention to fix a proportion between the graduates and non-graduates?

Sri S. NIJALINGAPPA.—I do not think that can be done.

Sri D. ABDUL RASHEED.—What are the conditions for promoting non-graduates to gazetted posts?

Sri S. NIJALINGAPPA.—Efficiency, experience and fitness.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಎಸ್. ಎಸ್. ಎಲ್. ಸಿ. ಆಗಿರುವವರನ್ನು ಗೆಜೆಟೆಡ್ ರ್ಯಾಂಕ್‌ಗೆ ಪ್ರಮೋಟ್ ಮಾಡುವ ವ್ಯವಸ್ಥೆ ಹಳೆಯ ಮೈಸೂರಿನಲ್ಲಿ ಇದ್ದಿಲ್ಲ ಎಂದು ಹೇಳಿದಿರಿ. ಈಗ ಹೊಸ ಮೈಸೂರಿಗೆ ಹೊರಗಿನಿಂದ ಬಂದವರಿಗೆ ಮಾತ್ರ ಆ ರೀತಿ ಮಾಡಬೇಕೆಂದು ಹೇಳಿದ್ದೀರಿ. ಇದನ್ನು ಎಲ್ಲರಿಗೂ ಅನ್ವಯಿಸುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ತಾವು ಪ್ರಶ್ನೆ ಸರಿಯಾಗಿ ತಿಳಿದುಕೊಂಡಿಲ್ಲ. ಇನ್ನೊಂದು ಸಲ ಓದಿ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ತಹಸೀಲ್‌ದಾರರ ಹುದ್ದೆಗೆ ನೇಮಕ ಮಾಡಲು ನಾನ್ ಗೆಜೆಟೆಡ್ ಆಫೀಸರುಗಳಿಂದ ಪಬ್ಲಿಕ್ ಸರ್ವೀಸ್ ಕಮಿಷನವರು ಅರ್ಜಿಗಳನ್ನು ಕರೆದಿದ್ದಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡಿದ್ದಾರೆಯಲ್ಲಾ!

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ಪ್ರಕಾರ ಎಸ್. ಎಸ್. ಎಲ್. ಸಿ. ಆದವರಿಗೆ ತಹಸೀಲ್‌ದಾರರ ಹುದ್ದೇ ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

Extension of Service to Officers and Officials after Superannuation.

Q.—376. Sri G. N. PUTTANNA (Tumkur).—

Will the Government be pleased to state:—

(*a*) whether it is a fact that they have passed an order stating that no extension will be granted to officers and officials after superannuation;

(*b*) the number of officers who have been granted extension of service after their superannuation since 1947 (the names of such officers mentioning the duration of their service after such extension of service was sanctioned may be furnished)?